# ಕನ್ನಡ ಪೋಸ್ಟ್

KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 82 | Pages. 2 | Date: 27-02-2026, FRIDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 82 - ಪುಟಗಳು : 2 | 27-02-2026 | ಶುಕ್ರವಾರ | Ph: 8762954248 | ದರ : ₹1


# ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆ ತಣ್ಣಗಾಗಿಸಿ

## ರಾಜ್ಯ ಸರ್ಕಾರಕ್ಕೆ ಹೆಚ್.ಡಿ.ಕೆ. ಸಲಹೆ | ಗ್ಯಾರಂಟಿಗಾಗಿ ಅಭಿವೃದ್ಧಿ ಕಡೆಗಣನೆ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಧಾರವಾಡದಲ್ಲಿ ಉತ್ತರ ಕರ್ನಾಟಕದ ಉದ್ಯೋಗಾಕಾಂಕ್ಷಿಗಳು ನಡೆಸುತ್ತಿರುವ ಪ್ರತಿಭಟನೆ ಯಾವ ಹಂತ ತಲುಪತ್ತದೆಂಬುದು ಗೊತ್ತಿಲ್ಲ. ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ತಾಲೂಕಿನ ಕೊಡಕಹಳ್ಳಿ ಗ್ರಾಮದಲ್ಲಿ ಗುರುವಾರ ನೂತನ ಶ್ರೀಲಕ್ಷ್ಮೀದೇವಿ, ಮಾರಮ್ಮ ದೇವಿ, ಗ್ರಾಮ ದೇವತೆ ಪ್ರತಿಷ್ಠಾಪನೆ ಹಾಗೂ ದೇವಸ್ಥಾನಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ದೇಶ ಪ್ರಪಂಚದಲ್ಲಿ ಆರ್ಥಿಕವಾಗಿ ಬೆಳೆಯುತ್ತಿರುವುದರಲ್ಲಿ ಮೂರನೇ ಸ್ಥಾನಕ್ಕೆ ಹೋಗುತ್ತಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರದ ನಿರುದ್ಯೋಗ ಸಮಸ್ಯೆ ವಿರುದ್ಧ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಬೃಹತ್ ಪ್ರತಿಭಟನೆಗೆ ಮುಂದಾಗಿರುವುದಲ್ಲದೆ ವಿಧಾನಸೌಧಕ್ಕೂ ಮುತ್ತಿಗೆ ಹಾಕುವ ಎಚ್ಚರಿಕೆ ನೀಡಿದ್ದಾರೆ. ರಾಜ್ಯ ಸರ್ಕಾರದ ಜನವಿರೋಧಿ ನೀತಿಗೆ ಇದು ಸಾಕ್ಷಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಧಾರವಾಡದಲ್ಲಿ ಲಕ್ಷಾಂತರ ರೂಪಾಯಿ ವ್ಯಯ



ಮಾಡಿ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ಕೇವಲ ತರಬೇತಿ ದೊರೆಯುತ್ತಿದೆ ವಿನಃ ಉದ್ಯೋಗ ನೀಡುವ ಕೆಲಸ ಕಳೆದ ಎರಡೂವರೆ ವರ್ಷಗಳಿಂದಲೂ ಆಗಿಲ್ಲ. ಇದನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಪ್ರತಿಭಟನೆಗೆ ಮುಂದಾಗಿದ್ದಾರೆ. ಈಗಾಗಲೇ ರಾಜ್ಯ ಸರ್ಕಾರಕ್ಕೆ ವಾರ ಕಾಲ ಗಡುವು ನೀಡಿದ್ದು, ಮುಂದೆ ವಿದ್ಯಾರ್ಥಿಗಳ ಹೋರಾಟ ಮತ್ಯಾವ ಸ್ವರೂಪ ಪಡೆದುಕೊಳ್ಳುವುದು ಎಂಬುದನ್ನು ಕಾದು ನೋಡಬೇಕಿದೆ ಎಂದರು.

ಮಕ್ಕಳಿಗೆ ವಿದ್ಯೆ ನೀಡುವುದು ಸರ್ಕಾರದ ಮೊದಲ ಕರ್ತವ್ಯವಾಗಿದೆ. ಆದರೆ ಶಿಕ್ಷಣ ಇಲಾಖೆಯೊಂದರಲ್ಲಿಯೇ ಸುಮಾರು 76 ಸಾವಿರ ಶಿಕ್ಷಕರ ಹುದ್ದೆ ಖಾಲಿ ಇದ್ದು, ಇನ್ನೂ ಕೂಡ ನೇಮಕಾತಿ ಮಾಡಿಲ್ಲ, ಹೀಗಿರುವಾಗ ನಮ್ಮ ಸರ್ಕಾರಿ ಶಾಲೆಗಳ ಸ್ಥಿತಿ ಹೇಳತೀರದು. ಉಳಿದಂತೆ ಎಲ್ಲಾ ಇಲಾಖೆಗಳಲ್ಲಿಯೂ ಕೂಡ 1 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಉಳಿದಿವೆ. ಕಳೆದ ಮೂರು ವರ್ಷದಿಂದ ಈ ಸರ್ಕಾರಒಂದು ಕೆಲಸ ಕೊಡಲಿಲ್ಲ.ಯುವಕರು

### ಜಿಲ್ಲೆಯ ಎಲ್ಲಾ ಶಾಸಕರು ನಮ್ಮವರೇ ಇರಲಿ

ಜಿಲ್ಲೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ನಾನು, ರೇವಣ್ಣ ಅನೇಕ ಅಭಿವೃದ್ಧಿ ಮಾಡಿ ಇಡೀ ರಾಜ್ಯದಲ್ಲಿ ಉತ್ತಮ ಜಿಲ್ಲೆಯಾಗಿ ಮಾಡಿದ್ದೇವೆ. ಮುಂದೆಯೂ ಈ ಕೆಲಸ ಮತ್ತಷ್ಟು ವ್ಯಾಪಿಸುವ ಸಲುವಾಗಿ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಶಕ್ತಿ ನೀಡಬೇಕೆಂದು ಸಚಿವ ಕುಮಾರಸ್ವಾಮಿ ಕೈ ಮುಗಿದು ಮನವಿ ಮಾಡಿದರು.

ನಮ್ಮ ಮನೆ ಬಾಗಿಲಿಗೆ ಬಂದಾಗ ತುಂಬಾ ಮನಸ್ಸಿಗೆ ನೋವಾಗುತ್ತೆ ಎಂದರು.

**ಗ್ಯಾರಂಟಿ ಹೆಸರಿನಲ್ಲಿ ಖಜಾನೆ ಲೂಟಿ**

ರಾಜ್ಯದ ಜನರ ತೆರಿಗೆ ಹಣವನ್ನು ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಸರ್ಕಾರ ಲೂಟಿ ಮಾಡುತ್ತಿದೆ. ಆದರೆ ಅಭಿವೃದ್ಧಿ ಮಾತ್ರ ಶೂನ್ಯ. ಹಣದ ದುಂದುಗಾರಿಕೆ ಆಗುತ್ತಿದೆ, ಲೂಟಿ ಆಗುತ್ತಿದೆ. ಸರ್ಕಾರದಲ್ಲಿ ವರ್ಗಾವಣೆ ದಂಧೆ, ಅಕ್ರಮಗಳು ನಡೆಯುತ್ತಿವೆ. ಐದು ಗ್ಯಾರಂಟಿ ಕೊಟ್ಟಿದ್ದೀವಿ ಅಂತಾರೆ. ಎರಡು ಸಾವಿರ ರೂ. ನಿಮ್ಮ ಮೇಲೆ ಸಾಲ ಹೇರುತ್ತಿದ್ದಾರೆ. ಅವರೇನು ಮನೆಯಿಂದ ತಂದು ಕೊಡ್ತಿಲ್ಲ. ಚುನಾವಣೆ ಗೆಲ್ಲಲು ನಿಮ್ಮ ಹಣವನ್ನು ಬೇಕಾಬಿಟ್ಟಿ ಖರ್ಚು ಮಾಡುತ್ತಿದ್ದಾರೆ. ಯಾವುದೇ ಅಭಿವೃದ್ಧಿ ಕಾಣುತ್ತಿಲ್ಲ. ಅದನ್ನು ನೀವು ಸೂಕ್ಷ್ಮವಾಗಿ ಗಮನಿಸಬೇಕು. ಇಂತಹ ಕಾರ್ಯಕ್ರಮಗಳ ಮೂಲಕ ತಾತ್ಕಾಲಿಕ ಖುಷಿ ಕೊಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಭಾರತ ವಿಶ್ವಕ್ಕೆ ಸರಿಸಾಟಿ: ದೇಶ ದೊಡ್ಡ ಮಟ್ಟದಲ್ಲಿ ಬೆಳೆಯುತ್ತಿದೆ. ನರೇಂದ್ರ ಮೋದಿಯವರ ಸರ್ಕಾರದಲ್ಲಿ ನಾನು ಎರಡು ಇಲಾಖೆ ಮಂತ್ರಿಯಾಗಿದ್ದೇನೆ. ದೇಶ ವಿಶ್ವಕ್ಕೆ ಸರಿಸಾಟಿಯಾಗಿ ಬೆಳೆಯುತ್ತಿದೆ. ಆಟೊಮೊಬೈಲ್ ಇಂಡಸ್ಟ್ರಿಗೆ ಆದ್ಯತೆ ನೀಡಿದ್ದೇವೆ. ಜನರು ಕೆಟ್ಟ ಹೊಗೆ ಕುಡಿಯಬಾರದೆಂದು ಎಲೆಕ್ಟ್ರಿಕ್ ಬೈಕ್, ಕಾರು ತಯಾರಿಸುತ್ತಿದ್ದೇವೆ. ತಯಾರಾದ ಎಲೆಕ್ಟ್ರಿಕ್ ವಾಹನಗಳಲ್ಲಿ ಮೂವತ್ತು ಪರ್ಸೆಂಟ್ ವಿದೇಶಕ್ಕೆ ರಫ್ತು ಮಾಡುತ್ತಿದ್ದೇವೆಂದು ಹೇಳಿದರು.

ಶಾಸಕ ಎ.ಮಂಜು ಮಾತನಾಡಿದರು. ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಹೊನ್ನವಳ್ಳಿ ಸತೀಶ್, ನರಸೇಗೌಡ, ಚೌಡೇಗೌಡ, ದಿವಾಕರ್, ಅಶೋಕ್, ವಿಜಯ ಕುಮಾರ್, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮೊದಲು ಕೊಡಕಹಳ್ಳಿ ಗ್ರಾಮಕ್ಕೆ ಆಗಮಿಸಿದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಅದ್ದೂರಿ ಸ್ವಾಗತ ಕೋರಲಾಯಿತು.

# ಸಕಲೇಶಪುರದಲ್ಲಿ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆ ಆಯೋಜನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಕಲೇಶಪುರದ ಇಮೇಜಿನ್ ಚಿತ್ರಕಲಾ ಶಾಲೆ ಹಾಗೂ ಹೆಚ್.ಸಿ.ಎಜುಕೇಶನ್ ಟ್ರಸ್ಟ್ ವತಿಯಿಂದ ಮಾ.1 ರಂದು ಪಟ್ಟಣದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ರಾಜ್ಯ ಮಟ್ಟದ

ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಚಂದ್ರಶೇಖರ್ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಎಲ್‌ಕೆಜಿಯಿಂದ ಪದವಿ ವರೆಗೆ ಆರು ವಿಭಾಗದಲ್ಲಿ ಸ್ಪರ್ಧೆ ನಡೆಯುತ್ತಿದೆ. ಒಂದೊಂದು ವಿಭಾಗಕ್ಕೆ ಒಂದೊಂದು ಚಿತ್ರ ಬಿಡಿಸುವ ವಿಷಯ ನೀಡಲಾಗಿದೆ. ಅಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರ ವರೆಗೆ ಸ್ಪರ್ಧೆ ನಡೆಯಲಿದೆ. ಈಗಾಗಲೇ 150 ಮಕ್ಕಳು ನೋಂದಣಿ ಮಾಡಿಕೊಂಡಿದ್ದಾರೆ ಎಂದರು.

ಚಿತ್ರಕಲಾ ಶಿಕ್ಷಕ ಲೋಕೇಶ್ ಮಳಲಿ ಮಾತನಾಡಿ, ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲರಿಗೂ ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಲಾಗುವುದು. ಜೊತೆಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡಲಾಗುವುದು, ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ 1 ರಿಂದ 7ನೇ ತರಗತಿ ವಿದ್ಯಾರ್ಥಿಗಳು ಯಾವುದಾದರೂ ಬಣ್ಣ ಬಳಸಬಹುದು. ಆದರೆ 8 ರಿಂದ ಪದವಿ ತರಗತಿ ವಿದ್ಯಾರ್ಥಿಗಳು ಜಲವರ್ಣ, ಆಕ್ರಲಿಕ್, ಪೋಸ್ಟರ್ ಕಲರ್, ಆಯಿಲ್ ಪೇಸ್ಟಲ್ ಬಣ್ಣ ಬಳಸಬೇಕೆಂದು ತಿಳಿಸಿದರು.

ಆಸಕ್ತರು ಫೆ.25 ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು. ಪ್ರವೇಶ ಶುಲ್ಕ 350 ರೂ. ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ನಂ. 9632382519 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಸೌಮ್ಯ ಚಂದ್ರಶೇಖರ್, ಚಿತ್ರ ಕಲಾವಿದ ಮಂಜುನಾಥ್ ಇದ್ದರು.

# ಚಟ್ನಹಳ್ಳಿಯಲ್ಲಿದ್ದ 18 ಜೀತ ಕಾರ್ಮಿಕರು ಬಂಧ ಮುಕ್ತ

## ಜಿಲ್ಲಾಧಿಕಾರಿ ಲತಾಕುಮಾರಿ ಸೂಚನೆ ಮೇರೆಗೆ ಕಾರ್ಯಾಚರಣೆ | ಹಗರೆ ಹಾಸ್ಟೆಲ್‌ನಲ್ಲಿ ವಾಸ್ತವ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರ ಸಮಯ ಪ್ರಜ್ಞೆ ಹಾಗೂ ಕಾರ್ಯದಕ್ಷತೆಯ ಪರಿಣಾಮವಾಗಿ 18 ಜನರು ಜೀತ ಪದ್ಧತಿಯಿಂದ ಮುಕ್ತರಾಗಿದ್ದಾರೆ.

ಹೌದು, ತಾಲೂಕಿನ ಹಳೇಬೀಡು ಹೋಬಳಿ ಚಟ್ನಹಳ್ಳಿಯಲ್ಲಿ ಶೆಡ್ವೊಂದರಲ್ಲಿ ಅಕ್ರಮವಾಗಿ ಬಂಧಿಸಲ್ಪಟ್ಟಿದ್ದ 18 ಜನರನ್ನು ಪೊಲೀಸರು ರಕ್ಷಿಸಿದ್ದಾರೆ. ಚಟ್ನಹಳ್ಳಿ ಗ್ರಾಮಸ್ಥರು ಬುಧವಾರ ರಾತ್ರಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರಿಗೆ ಕರೆ ಮಾಡಿ ತಿಳಿಸಿದ್ದರು. ಜಿಲ್ಲಾಧಿಕಾರಿ ತಕ್ಷಣ ಬೇಲೂರು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರಿಗೆ ಹೇಳಿದ್ದಾರೆ. ರಾತ್ರಿಯೇ ಪೊಲೀಸರೊಂದಿಗೆ ಸ್ಥಳಕ್ಕೆ ದೌಡಾಯಿಸಿದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಪಿ.ಲಿಂಗರಾಜು ಕಾರ್ಮಿಕರು ಇರುವುದನ್ನು ಖಚಿತ ಮಾಡಿಕೊಂಡಿದ್ದಾರೆ. ಸದ್ಯ ಎಲ್ಲರಿಗೂ ಹಗರೆ ಗ್ರಾಮದ ಸರ್ಕಾರಿ ವಸತಿ ನಿಲಯದಲ್ಲಿ



### ಚಿತ್ರ ಹಿಂಸೆ, ಉಪವಾಸ ಯಾತನೆ

ಜೀತ ಕಾರ್ಮಿಕರೊಬ್ಬರು ಮಾತನಾಡಿ, ಲಾರಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದೆ. ಉತ್ತಮ ಸಂಬಳ ಕೊಡಿಸುತ್ತೇನೆ ಎಂದು ಇಲ್ಲಿಗೆ ಕರೆತಂದು ಬಿಟ್ಟಿದ್ದಾರೆ. ನಾನು ಮುಸಲ್ಮಾನನಾಗಿದ್ದು ರಂಜಾನ್ ಹಬ್ಬಕ್ಕೆ ಹೋಗ್ತಿನಿ ಎಂದರೂ ಬಿಡಲಿಲ್ಲವೆಂದು ಅಳಲು ತೋಡಿಕೊಂಡರು.

ನಮಗೆ ಸರಿಯಾಗಿ ಊಟ, ಉಪಹಾರ ನೀಡುತ್ತಿರಲಿಲ್ಲ. ಮಾಡಿದ ಕೆಲಸಕ್ಕೆ ಸೂಕ್ತ ವೇತನ ಸಹ ಕೊಡುತ್ತಿರಲಿಲ್ಲ. ಹಿಂಸೆ ತಾಳಲಾರದೆ ಕೆಲವರು ಹೇಗೋ ತಪ್ಪಿಸಿಕೊಂಡು ಹೋಗಿದ್ದಾರೆ. ಇನ್ನು ಓಡಲೆತ್ನಿಸಿದ ಹಲವರು ಸಿಕ್ಕಿಬಿದ್ದು, ಹೊಡೆತ ತಿಂದಿದ್ದಾರೆಂದು ಭಾವುಕರಾದರು.

ವಾಸ್ತವ್ಯದ ವ್ಯವಸ್ಥೆ ಮಾಡಲಾಗಿದೆ.

**ಬಡತನವೇ ಬಂಡವಾಳ**

ಅಮಾಯಕರ ಬಡತನ ಹಾಗೂ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು ಅಮಾನವೀಯವಾಗಿ ದುಡಿಸಿಕೊಳ್ಳಲಾಗುತ್ತಿತ್ತು. ಪ್ರಕರಣ ಸಂಬಂಧ ಮುನಿಯನಕೊಪ್ಪಲು ಗ್ರಾಮದ ನಾಗರಾಜ್ ಹಾಗೂ ಮುನೇಶ್ ಎಂಬುವವರ ವಿರುದ್ಧ ಎಫ್ಐಆರ್ ದಾಖಲಾಗಿದೆ. ಆರೋಪಿಗಳು ಬಸ್, ರೈಲ್ವೆ ನಿಲ್ದಾಣಗಳಲ್ಲಿ ಗೊತ್ತು ಗುರಿ ಇಲ್ಲದೆ ನಿಂತವರನ್ನು ಕರೆತರುತ್ತಿದ್ದರು. ಚಟ್ನಹಳ್ಳಿಯ ಶೆಡ್‌ನಲ್ಲಿ ಕೂಡಿ ಹಾಕಿ ಜಮೀನುಗಳಲ್ಲಿ ಕೂಲಿ ಕೆಲಸಕ್ಕೆ ಕಳುಹಿಸುತ್ತಿದ್ದರು. ಜೀತ ಕಾರ್ಮಿಕರ ಮೇಲ್ವಿಚಾರಣೆಯನ್ನು ಇವರೇ ನೋಡಿಕೊಳ್ಳುತ್ತಿದ್ದರಿಂದ ಭೂ ಮಾಲೀಕರು ಸಹ ಪೂರ್ವಾಪರ ವಿಚಾರಿಸುವ ಔದಾರ್ಯ ತೋರಿರಲಿಲ್ಲ. ಅವರಿಗೆ ಮೊಬೈಲ್ ಇಲ್ಲದೆ, ಸಾರ್ವಜನಿಕರ ಸಂಪರ್ಕವೂ ಇಲ್ಲದ್ದರಿಂದ ಹಲವು ತಿಂಗಳಿಂದ ಜೀತದಾಳುಗಳಾಗಿ ಚಿತ್ರಹಿಂಸೆ ಅನುಭವಿಸುತ್ತಿದ್ದರು ಎನ್ನಲಾಗಿದೆ.

ಪೊಲೀಸರು ಎಲ್ಲರನ್ನೂ ಹಾಸನದ ಅಂಬೇಡ್ಕರ್ ಭವನಕ್ಕೆ ಕರೆತಂದು ಉಪಚರಿಸಿದರು. ಆರೋಗ್ಯ ತಪಾಸಣೆ ಬಳಿಕ ಎಲ್ಲರಿಗೂ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ಜೀತ ಕಾರ್ಮಿಕರ ವಿಳಾಸ ಪಡೆದು ಅವರವರ ಊರಿಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ಜಿಲ್ಲಾಡಳಿತದಿಂದ ಮಾಡಲಾಗುತ್ತಿದೆ.

# ಸಕಲೇಶಪುರದಲ್ಲಿ ಮಹಿಳಾ ರೈತ ವರ್ಷ ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಗುರುತರ ಸಾಧನೆ ಮಾಡುತ್ತಾ ದೇಶದ ಪ್ರಗತಿಗೆ ಕೊಡುಗೆ ನೀಡುತ್ತಿದ್ದು ಕೃಷಿಯಲ್ಲೂ ಛಾಪು ಮೂಡಿಸಬೇಕು ಎಂದು ಶ್ರೀ ಶ್ರೀ ರೂರಲ್ ಡೆವಲ್‌ಪ್ಮೆಂಟ್ ಪ್ರೋಗ್ರಾಂ ಸಂಸ್ಥೆಯ (ಎಸ್ ಎಸ್‌ಆರ್‌ಡಿಪಿ) ಯೋಜನಾ ಸಂಯೋಜಕಿ ದಿವ್ಯ ಹೇಳಿದರು.

ಎಸ್‌ಎಸ್‌ಆರ್‌ಡಿಪಿ, ಡಿಜಿಟಲ್ ಗ್ರೀನ್ ಸಂಸ್ಥೆ ಮತ್ತು ಐಸಿಸಿ ಆರ್‌ಎಲ್ ಯೋಜನೆ ವತಿಯಿಂದ ಪಟ್ಟಣದಲ್ಲಿ ಗುರುವಾರ ಅಂತಾರಾಷ್ಟ್ರೀಯ ಮಹಿಳಾ ರೈತ ವರ್ಷ ಕಾರ್ಯಕ್ರಮ ಅಂಗವಾಗಿ ಏರ್ಪಡಿಸಿದ್ದ ಎಐ ತಂತ್ರಜ್ಞಾನ: ಸಮರ್ಥ ಮಹಿಳೆ, ಸುಸ್ಥಿರ ಕೃಷಿ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

ಐಸಿಸಿ ಆರ್‌ಎಲ್ ರೈತ ಮಹಿಳೆಯರಿಗೆ ನೆರವಾಗುವ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದಿದೆ. ಮಣ್ಣಿನ ಫಲವತ್ತತೆ, ನೀರಿನ ನಿರ್ವಹಣೆ, ಜೀವನ ವೈವಿಧ್ಯತೆ, ವಾತಾವರಣ ವೈಪರೀತ್ಯ ಮತ್ತು ಜೀಪನೋಪಾಯ ಅವಕಾಶಗಳ ಬಗ್ಗೆ ತರಬೇತಿ ಮತ್ತು ಪ್ರಾತ್ಯಕ್ಷಿಕೆ ನೀಡುತ್ತಿದೆ ಎಂದರು. ಈ ಕಾರ್ಯಕ್ರಮಕ್ಕೆ ಹಿಂದೂಸ್ಥಾನ್ ಲಿವರ್ ಸಂಸ್ಥೆ ಮತ್ತು ಜೆ.ಡಿ.ಇ ಪೀಟ್ಸ್ ಸಂಸ್ಥೆಗಳು ಹಣಕಾಸು ನೆರವು ನೀಡುತ್ತಿವೆ. ಏಡಿಹೆಚ್ ಸಂಸ್ಥೆ ಮುಖ್ಯ ಅನುಷ್ಠಾನ ಸಂಸ್ಥೆಯಾಗಿ ಕೆಲಸ ಮಾಡುತ್ತಿವೆ. ಈ



ಯೋಜನೆ ಲಿಂಗ ಸಮಾನತೆಗೆ ಹೆಚ್ಚು ಮಹತ್ವ ನೀಡುತ್ತಿದೆಯೆಂದರು.

ಕೇಂದ್ರ ಕಾಫಿ ಸಂಶೋಧನಾ ಸಂಸ್ಥೆ ಕೀಟ ಶಾಸ್ತ್ರಜ್ಞೆ ಡಾ. ಉಮಾ ಮಾತನಾಡಿ, ಕಾಫಿ ಬೆಳೆಯಲ್ಲಿ ಸಮಗ್ರ ಕೀಟ ನಿರ್ವಹಣೆ ಮತ್ತು ರೋಗ ನಿರ್ವಹಣೆ ಮಾಡುವುದನ್ನು ಅರಿಯಬೇಕು. ರಾಸಾಯನಿಕ ಬಳಕೆ ಕಡಿಮೆ ಮಾಡಲು ಲಭ್ಯವಿರುವ ಜೈವಿಕ ಮತ್ತು ಸಾವಯವ ಪದ್ಧತಿ ಬಗ್ಗೆ ಮಾಹಿತಿ ನೀಡಿದರು.

ಪುನಃಶ್ಚೇತನ ಕೃಷಿಯನ್ನು ಸಾಧಿಸಬೇಕಾದರೆ ಮಣ್ಣಿನ ಆರೋಗ್ಯ, ರೋಗ ಮತ್ತು ಕೀಟ ನಿಯಂತ್ರಣಕ್ಕೆ ಸಾವಯವ ಮತ್ತು ಜೈವಿಕ ಕ್ರಮಗಳನ್ನು ಅನುಸರಿಸಬೇಕೆಂದರು.

ಡಾ. ಪ್ರೇಮಲತಾ ಮಾತನಾಡಿ, ಅತಿಯಾದ ರಾಸಾಯನಿಕ ಬಳಕೆ ಮಹಿಳೆಯರ ಆರೋಗ್ಯದ ಮೇಲೆ ಬಹಳ ಪರಿಣಾಮ ಬೀರುತ್ತವೆ. ಹುಟ್ಟುವ ಮಕ್ಕಳಿಗೆ ನರಗಳ ದೌರ್ಬಲ್ಯತೆ ಉಂಟು ಮಾಡುತ್ತವೆ. ಋತುಚಕ್ರದ ಮೇಲೆ ಪರಿಣಾಮ ಬೀರುತ್ತವೆ. ಆದ ಕಾರಣ ರೈತ ಮಹಿಳೆಯರು ರಾಸಾಯನಿಕ ಸಿಂಪಡಣೆ ತೊಡಗಿಸಿಕೊಳ್ಳುವುದು ಕಡಿಮೆ ಮಾಡಬೇಕೆಂದು ತಿಳಿಸಿದರು.

ಡಾ. ಪ್ರತೀಕ್ಷಾ ಮಾತಾನಾಡಿ, ಮಹಿಳೆಯರನ್ನು ಹೆಚ್ಚಾಗಿ ಕಾಡುವ ಸ್ತನ ಕ್ಯಾನ್ಸರ್, ಗರ್ಭಕೋಶದ ಕ್ಯಾನ್ಸರ್ ಕುರಿತು ಮಾಹಿತಿ ನೀಡಿದರು.

ಡಿಜಿಟಲ್ ಗ್ರೀನ್ ಸಂಸ್ಥೆಯ ಭಾಗ್ಯವತಿ ಮಾತನಾಡಿ, ಮೊಬೈಲ್ ಆಧಾರಿತ ಫಾರ್ಮರ್ ಚಾಟ್ ಬಳಸುವ ಮೂಲಕ ತಮ್ಮ ಬೆರಳ ತುದಿಯಲ್ಲಿಯೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು. ಮಾರುಕಟ್ಟೆ ಬೆಲೆ, ವಾತಾವರಣ ಮುನ್ಸೂಚನೆಯನ್ನೂ ತಿಳಿದುಕೊಳ್ಳುವ ಮೂಲಕ ಉತ್ತಮ ಬೆಲೆ ಸಿಗುವ ಹಾಗೆ ಮಾಡಬಹುದೆಂದರು. ಜಿಲ್ಲಾ ಸಂಪನ್ಮೂಲ ವ್ಯಕ್ತಿ ಕುಮುದಾ ಮಾತನಾಡಿದರು.

# ಫೆ.28 ರಿಂದ 2 ದಿನ ಹಾಸನ ಸಾಹಿತ್ಯೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಕ್ಕಳಲ್ಲಿ ಓದುವ ಅಭ್ಯಾಸ ಬೆಳೆಸುವ ಹಾಗೂ ಸಾಹಿತ್ಯದತ್ತ ಆಸಕ್ತಿ ಮೂಡಿಸುವ ಉದ್ದೇಶದಿಂದ ನಗರದ ಚಿಕ್ಕಹೊನ್ನೇನಹಳ್ಳಿಯ ವಿಜಯ ಶಾಲೆ ವತಿಯಿಂದ ದ ಹಾಸನ್ ಲಿಟರೇಚರ್ ಫೆಸ್ಟಿವಲ್ ಚಿಲ್ಡ್ರನ್ ಎಡಿಷನ್ (ಹಾಸನ ಸಾಹಿತ್ಯೋತ್ಸವ-ಮಕ್ಕಳ ಆವೃತ್ತಿ) ವಿಶೇಷ ಕಾರ್ಯಕ್ರಮವನ್ನು ಫೆ.28 ಮತ್ತು ಮಾ.1 ರಂದು ಶಾಲೆಯ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದೆ ಎಂದು ಶಾಲೆಯ ಸಂಸ್ಥಾಪಕ ಮುಖ್ಯಸ್ಥೆ ತಾರ ಎಸ್. ಸ್ವಾಮಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಈ ಸಾಹಿತ್ಯೋತ್ಸವವು ಸಾರ್ವಜನಿಕ ಕಾರ್ಯಕ್ರಮವಾಗಿದ್ದು, ನಗರ ಹಾಗೂ ಜಿಲ್ಲೆಯ ಎಲ್ಲಾ ಶಾಲಾ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಬಾಲ್ಯದಿಂದಲೇ ಓದುವ ಸಂಸ್ಕೃತಿಯನ್ನು ಬೆಳೆಸುವುದು, ಸಾಹಿತ್ಯವನ್ನು ಅರ್ಥಪೂರ್ಣವಾಗಿ ಹಾಗೂ ಆಸಕ್ತಿದಾಯಕವಾಗಿ ಮಕ್ಕಳಿಗೆ ಪರಿಚಯಿಸುವುದು ಮತ್ತು ಸಮುದಾಯದಲ್ಲಿ ಪುಸ್ತಕ ಓದುವ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು, ಎಲ್ಲಕ್ಕಿಂತ ಮುಖ್ಯವಾಗಿ ಲೇಖಕರ ಜೊತೆ ಸಂವಾದ ನಡೆಸುವುದು ಇದರ ಪ್ರಮುಖ ಉದ್ದೇಶವಾಗಿದೆ ಎಂದರು.

ಖ್ಯಾತ ಲೇಖಕ ಗಿರೀಶ್ ರಾವ್ ಹತ್ವಾರ್




(ಜೋಗಿ) ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ

ಎಚ್. ಬಿ.ಮದನ್‌ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಸಾಹಿತ್ಯೋತ್ಸವದಲ್ಲಿ ಲೇಖಕರೊಂದಿಗೆ ಮಕ್ಕಳ ಸಂವಾದ, ಕಥೆ ಹೇಳುವ ಕಾರ್ಯಕ್ರಮ, ಸೃಜನಾತ್ಮಕ ಬರವಣಿಗೆ ಕಾರ್ಯಾಗಾರ, ವಿದ್ಯಾರ್ಥಿಗಳಿಗೆ ವಿನ್ಯಾಸಗೊಳಿಸಿದ ವೈವಿಧ್ಯಮಯ ಚಟುವಟಿಕೆ ನಡೆಯಲಿವೆ. ಆಸಕ್ತಿ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ನೋಂದಾಯಿಸಿಕೊಳ್ಳಬಹುದು. ಮೊದಲು ನೋಂದಾಯಿಸಿದವರಿಗೆ ಆದ್ಯತೆ ಎಂದರು. ಪ್ರಮುಖ ಆಕರ್ಷಣೆಯಾಗಿ ಸ್ವಪ್ನ ಬುಕ್ ಹೌಸ್ ವತಿಯಿಂದ 1000ಕ್ಕೂ ಹೆಚ್ಚು ಪುಸ್ತಕ ಒಳಗೊಂಡ ಭವ್ಯ ಪುಸ್ತಕ ಮೇಳ ಏರ್ಪಡಿಸಲಾಗಿದೆ. ವಿದ್ಯಾ ವಾಟಿಕಾದಲ್ಲಿ ಸಾಹಿತ್ಯಾಸಕ್ತರು ಪುಸ್ತಕ ವೀಕ್ಷಿಸಿ, ತಮ್ಮಿಷ್ಟದ ಕೃತಿಗಳನ್ನು ಆರಿಸಿಕೊಂಡು ಓದುವ ಅವಕಾಶ ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳಿಂದಲೇ ನಾಟಕ ಮತ್ತು ಕಥನ ಪ್ರದರ್ಶನ ವಿಶೇಷ ಆಕರ್ಷಣೆಯಾಗಲಿವೆ. ವಿಲಿಯಂ ಶೇಕ್ಸ್ ಪಿಯರ್ ಹಾಗೂ ತೆನಾಲಿ ರಾಮಕೃಷ್ಣ ಸೇರಿದಂತೆ ಅನೇಕ ಸಾಹಿತ್ಯ ಕೃತಿಗಳನ್ನು ವಿದ್ಯಾರ್ಥಿಗಳು ರಂಗಮಂಚಕ್ಕೆ ತರಲಿದ್ದಾರೆ ಎಂದರು.

ಶಾಲೆಯ ಡಾ.ಶ್ರೀಲಕ್ಷ್ಮಿ ಮಾತನಾಡಿ, ವಿಶೇಷ ಆಕರ್ಷಣೆಯಾಗಿ ಬಂಡಾಯ ವಾಲ್ ರೂಪಿಸಲಾಗಿದೆ. ನಮ್ಮ ಹೆಮ್ಮೆ, ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಸ್ತಾಕ್ ಅವರ ಹಾರ್ಟ್ ಲ್ಯಾಂಪ್ ಕೃತಿಯಿಂದ ಪ್ರೇರಿತವಾಗಿ ಈ ವೇದಿಕೆ ಸೃಷ್ಟಿಸಲಾಗಿದೆ. ಹಾರ್ಟ್ ಲ್ಯಾಂಪ್ ಕೃತಿ ಪ್ರತಿರೋಧ, ಅಸ್ತಿತ್ವದ ಗುರುತು, ಅಸಮಾನತೆ ಹಾಗೂ ಅಂಚಿಗೆ ತಳ್ಳಲ್ಪಟ್ಟವರ ಬದುಕಿನ ಪ್ರಶ್ನೆಗಳನ್ನು ನಮ್ಮ ಮುಂದೆ ತರುತ್ತದೆ ಎಂದರು.

# ಕನಕ ಗುರುಪೀಠ ಅಭಿವೃದ್ಧಿಗೆ ಸಂಪೂರ್ಣ ಸಹಕಾರ: ಯತೀಂದ್ರ ಸಿದ್ದರಾಮಯ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸೀಕೆರೆ ಹೋಬಳಿಯ ಗಂಗೇಮಡುವು ಗ್ರಾಮದಲ್ಲಿ ನಿರ್ಮಾಣಗೊಳ್ಳುತ್ತಿರುವ ಕನಕ ಗುರುಪೀಠ ಶಾಖಾ ಮಠದ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡಲಾಗುವುದು, ಈ ಮಠವು ಪ್ರಮುಖ ಆಧ್ಯಾತ್ಮಿಕ ಕೇಂದ್ರವಾಗಿ ಬೆಳೆಯಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ತಾಲೂಕಿನ ದುದ್ದ ಹೋಬಳಿಯ ಹರಿಹರಪುರದಲ್ಲಿ ನಡೆದ ನೂತನ ದೇವಾಲಯ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಮಾತನಾಡಿ, ಶ್ರೀ ಶಿವಾನಂದಪುರಿ ಸ್ವಾಮೀಜಿಗಳ ಆಧ್ಯಾತ್ಮಿಕ ಮಾರ್ಗದರ್ಶನ ಹಾಗೂ ರಾಜ್ಯ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಹೆಚ್.ಎಂ. ರೇವಣ್ಣ ಅವರ ಸಹಕಾರದಿಂದ ಮಠದ ನಿರ್ಮಾಣ ಕಾರ್ಯಗಳು ವೇಗವಾಗಿ ಸಾಗುತ್ತಿವೆ ಎಂದು ತಿಳಿಸಿದರು.



ಮಠ ನಿರ್ಮಾಣವು ಕೇವಲ ಕಟ್ಟಡ ನಿರ್ಮಾಣಕ್ಕೆ ಸೀಮಿತವಾಗಿಲ್ಲ. ಅದು ಸಮಾಜದ ಏಕತೆ, ಶಕ್ತಿ ಮತ್ತು ಆತ್ಮವಿಶ್ವಾಸವನ್ನು ವೃದ್ಧಿಸುವ ಮಹತ್ವದ ಚಳವಳಿಯಾಗಿದೆ. ಸಮಾಜದ ಮುಖಂಡರಾಗಿ ಪಟೇಲ್ ಶಿವಪ್ಪ ಅವರು ಸಮಾಜದ ಏಳಿಗೆಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದು, ಅವರ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳು ಇನ್ನಷ್ಟು ವಿಸ್ತಾರವಾಗಲಿ ಎಂದು ಶುಭ ಹಾರೈಸಿದರು.

2019ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಕನಕ ಗುರುಪೀಠಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ನಂತರ ಸುಮಾರು 30 ಎಕರೆ ಪ್ರದೇಶದಲ್ಲಿ ಕನಕ ನೌಕರರ ಸಂಘದ ಸಹಕಾರದೊಂದಿಗೆ ಮಠದ ಕಟ್ಟಡ ನಿರ್ಮಾಣ ಆರಂಭಗೊಂಡಿದ್ದು, ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ರಸ್ತೆ ನಿರ್ಮಾಣ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರ ಸಹಕಾರದಿಂದ ಸಮುದಾಯ ಭವನ ನಿರ್ಮಾಣ ಕಾರ್ಯವೂ ಪೂರ್ಣಗೊಂಡಿದೆ ಎಂದು ವಿವರಿಸಿದರು.

ಇದೇ ವೇಳೆ ಮುಜರಾಯಿ ಇಲಾಖೆಯಿಂದ ಶ್ರೀ ಗಂಗಾಧರೇಶ್ವರ ದೇವಾಲಯದ ಪುನರ್ ನಿರ್ಮಾಣ ಕಾರ್ಯವೂ ಕೈಗೊಳ್ಳಲಾಗುತ್ತಿದೆ. ಗೊಲ್ಲರಳ್ಳಿ ಗೇಟ್ ಸಮೀಪ ನಿರ್ಮಾಣಗೊಳ್ಳುತ್ತಿರುವ ಕನಕ ಗುರುಪೀಠವು ಮುಂದಿನ ದಿನಗಳಲ್ಲಿ ಕುರುಬ ಸಮಾಜದ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿ ರೂಪುಗೊಳ್ಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಹಾಸನ ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಮಾತನಾಡಿ, ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಮಠದ ಅಭಿವೃದ್ಧಿಗೆ ವೈಯಕ್ತಿಕವಾಗಿ ಮುಂದಾಗುವ ಭರವಸೆ ನೀಡಿರುವುದು ಕುರುಬ ಸಮಾಜಕ್ಕೆ ಹೊಸ ಆತ್ಮವಿಶ್ವಾಸ ತುಂಬಿದೆ ಎಂದು ಹೇಳಿದರು. ಇದು ಸಮಾಜದ ಏಕತೆ ಮತ್ತು ಭವಿಷ್ಯದ ಪೀಳಿಗೆಗೆ ದಿಕ್ಕು ತೋರಿಸುವ ಮಹತ್ವದ ಹೆಜ್ಜೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಸರ್ಕಾರದ ಅನುದಾನ, ಜನಪ್ರತಿನಿಧಿಗಳ ಸಹಕಾರ ಮತ್ತು ಸಮಾಜದ ಒಗ್ಗಟ್ಟಿನಿಂದ ಕನಕ ಗುರುಪೀಠವು ರಾಜ್ಯ ಮಟ್ಟದ ಆಧ್ಯಾತ್ಮಿಕ ಮತ್ತು ಸಾಮಾಜಿಕ ಕೇಂದ್ರವಾಗಿ ಬೆಳೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿ, ಸಮಾಜದ ಮುಖಂಡರು, ಯುವಕರು ಹಾಗೂ ಭಕ್ತರು ಮಠ ನಿರ್ಮಾಣ ಕಾರ್ಯಕ್ಕೆ ಸಕ್ರಿಯವಾಗಿ ಕೈಜೋಡಿಸುವಂತೆ ಕರೆ ನೀಡಿದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಜನಪ್ರಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುರುಬ ಸಮುದಾಯದಲ್ಲಿ ಜನಿಸಿ ಉತ್ತಮ ಆಡಳಿತ ನೀಡುತ್ತಿದ್ದಾರೆ. ಅಂತಹ ಸಮಾಜದ ವತಿಯಿಂದ ನಿರ್ಮಾಣವಾಗುತ್ತಿರುವ ಮಠದ ಅಭಿವೃದ್ಧಿಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅರಕಲಗೂಡು ವಿಧಾನಸಭಾ ಕ್ಷೇತ್ರದ ಮುಖಂಡರಾದ ಶ್ರೀಧರ್ ಗೌಡ, ಕೆಪಿಸಿಸಿ ಸದಸ್ಯ ಹೊನ್ನಿಕೊಪ್ಪಲು ಮಂಜೇಗೌಡ, ಪ್ರಸನ್ನ ಕುಮಾರ್, ದುದ್ದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್ ಮತ್ತಿತರರಿದ್ದರು.

# ಯುವಕರು ಗ್ರಾಮೀಣ ಭಾಗದ ಅಭಿವೃದ್ಧಿಗೆ ಆದ್ಯತೆ ನೀಡಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಯುವಕರು ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ಗ್ರಾಮೀಣ ಭಾಗದ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು ಎಂದು ಹಾಸನ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕಾರ್ಯಕ್ರಮ ಸಂಯೋಜನಾಧಿಕಾರಿ ಯೋಗೀಶ್ ಹೇಳಿದರು.

ತಾಲೂಕಿನ ಕೊಮ್ಮನಹಳ್ಳಿ ಗ್ರಾಮದಲ್ಲಿ ನಗರದ ಬೆಸ್ಟ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್ಎಸ್ಎಸ್ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿ, ಯುವಕರು ದೇಶ ಸೇವೆಯಲ್ಲಿ ತೊಡಗುವ ಮೂಲಕ ದೇಶಾಭಿಮಾನವನ್ನು ಮೈಗೂಡಿಸಿಕೊಳ್ಳಬೇಕು. ಯುವಕರು ಒಂದು ವಾರದ ಕಾಲ ನಡೆಯುವ ರಾಷ್ಟ್ರೀಯ ಸೇವಾ ಯೋಜನೆ ಶಿಬಿರದಲ್ಲಿ ಗ್ರಾಮದಲ್ಲಿ ಸ್ವಚ್ಛತೆ ಮಾಡುವುದರ ಮೂಲಕ ಗ್ರಾಮೀಣ ಭಾಗದ ಜನರಿಗೆ ಅರಿವು ಮೂಡಿಸಬೇಕು. ವಿದ್ಯಾಭ್ಯಾಸದೊಂದಿಗೆ ಇಂತಹ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢರಾಗುವ ಮೂಲಕ ಉತ್ತಮ ಗುಣ ಬೆಳೆಸಿಕೊಳ್ಳಲು ಸಹಕಾರಿಯಾಗಲಿದೆ ಎಂದು ಹೇಳಿದರು. ಹಾಸನಾಂಬ ರೂರಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಪಿ.ಎಸ್. ಮಂಜೇಗೌಡ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಒಂದು ವಾರಗಳ ಕಾಲ ನಡೆಯುವ ಈ ಎನ್ಎಸ್ಎಸ್ ಶಿಬಿರವನ್ನು ಗ್ರಾಮೀಣ ಭಾಗದ ಜನರು ಸಹಕಾರದಿಂದ ಯಶಸ್ವಿಯಾಗಿ ನಡೆಸಬೇಕಾಗಿದೆ. ಯುವಕರು ವಿದ್ಯಾಭ್ಯಾಸದ ಅವಧಿಯಲ್ಲಿ ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಿ ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಪ್ರತಿಯೊಬ್ಬ ಯುವಕರು ಉನ್ನತ ಶಿಕ್ಷಣ ಪಡೆದುಕೊಳ್ಳುವ ಮೂಲಕ ಸಮಾಜದ ಉನ್ನತ ಸ್ಥಾನಗಳನ್ನು ಅಲಂಕರಿಸಬೇಕು. ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ತಮ್ಮ ಸಮಸ್ಯೆ ದೂರ ಮಾಡಿಕೊಳ್ಳಬಹುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಕೆ.ಸಿ. ನವೀನ್ ಮಾತನಾಡಿ, ಇಂದಿನ ಯುವಕರು ಮಾನವಿಯ ಗುಣಗಳನ್ನು ಬೆಳೆಸಿಕೊಳ್ಳುತ್ತಿಲ್ಲ. ಇದರಿಂದ ಅವರು ಎಷ್ಟೇ ವಿದ್ಯಾವಂತರಾದರೂ ಪ್ರಯೋಜನವಿಲ್ಲ. ಮಾನವೀಯ ಮೌಲ್ಯಗಳು ಯುವಕರಿಗೆ ಅತ್ಯಂತ ಅವಶ್ಯಕವಾಗಿದೆ. ರಾಷ್ಟ್ರೀಯ ಸೇವಾ ಯೋಜನೆಯಂತಹ ಕಾರ್ಯಕ್ರಮಗಳಿಂದ ದೇಶದಲ್ಲಿ ಆಂತರಿಕ ಕಲಹಗಳನ್ನು ನಿಯಂತ್ರಿಸಬಹುದು. ವಿದ್ಯಾರ್ಥಿಗಳು ಜೀವನದಲ್ಲಿ ವೈಜ್ಞಾನಿಕತೆ ಮತ್ತು ವೈಚಾರಿಕತೆಗಳನ್ನು ಬೆಳಸಿಕೊಂಡರೆ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಬಹುದು ಎಂದರು.

ಹಾಸನಾಂಬ ರೂರಲ್ ಎಜುಕೇಶನ್ ಟ್ರಸ್ಟ್ ಖಜಾಂಚಿ ಈಶ್ವರಪ್ಪ, ಬೆಸ್ಟ್ ಕಾಲೇಜಿನ ಆಡಳಿತಾಧಿಕಾರಿಗಳಾದ ಎಂ.ಡಿ. ನಿತ್ಯಾನಂದ, ಡಾ.ಬಿ. ವಿಕ್ರಂ, ಎನ್.ಎಸ್.ಎಸ್. ಅಧಿಕಾರಿ ಕೆ.ಆರ್. ಗಿರೀಶ್, ಅಧ್ಯಾಪಕರಾದ ಆರ್.ಟಿ.ಪುನೀತ್, ಅರ್ಚನಾ ಹಾಜರಿದ್ದರು.


# ಇಂದಿನಿಂದ ಓರಗಲ್ ತಿಮ್ಮಪ್ಪ ಜಾತ್ರಾ ಮಹೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲೂಕಿನ ಸುಕ್ಷೇತ್ರ ಓರಗಲ್ ಬೆಟ್ಟದ ಮೇಲೆ ನೆಲೆಸಿರುವ ಶ್ರೀ ಓರಗಲ್ ತಿಮ್ಮಪ್ಪ ಸ್ವಾಮಿಯ 36ನೇ ವರ್ಷದ ಜಾತ್ರಾ ಮಹೋತ್ಸವವು ದೇವಾಲಯದ ಸಂಪ್ರದಾಯದಂತೆ ನಡೆಸಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ದೇವಾಲಯದ ಅಭಿವೃದ್ಧಿ ಸಮಿತಿ ಅಧ್ಯಕ್ಷ ನಾಗಭೂಷಣ್ ತಿಳಿಸಿದರು.

ಫೆ. 27 ರಿಂದ ಮಾರ್ಚ್ 1ರ ವರೆಗೆ ಜಾತ್ರಾ ಮಹೋತ್ಸವ ಜರುಗಲಿದ್ದು ಪ್ರತಿದಿನ ವಿಶೇಷ ಪೂಜೆ ಅಲಂಕಾರ ಪ್ರಿಯನಾದ ತಿಮ್ಮಪ್ಪ ಸ್ವಾಮಿಗೆ ವಿಶೇಷ ಅಲಂಕಾರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿನಿಯೋಗ ಹೀಗೆ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸ್ವಾಮಿಯ ಜಾತ್ರಾ ಮಹೋತ್ಸವ ನಡೆಯಲಿದೆ ಎಂದರು.

ಫೆ. 27ರ ಮುಂಜಾನೆ ತಿಮ್ಮಪ್ಪ ಸ್ವಾಮಿ ಹಾಗೂ ಬೆಟ್ಟದ ಮತ್ತೊಂದು ಬದಿಯಲ್ಲಿರುವ ಶ್ರೀ ಪರ್ವತ ಮಲ್ಲೇಶ್ವರ ಸ್ವಾಮಿಯರ ಮೂಲ ವಿಗ್ರಹಕ್ಕೆ ವಿವಿಧ ಬಗೆಯ ಅಭಿಷೇಕಗಳು ನಾನಾ ಅರ್ಚನೆಗಳು ಭಕ್ತರ ಶ್ರದ್ಧಾಭಕ್ತಿಯೊಂದಿಗೆ ನಡೆಯುತ್ತವೆ ಎಂದು ಹೇಳಿದರು.



ಫೆ. 27ರ ಬೆಳಿಗ್ಗೆ 9 ಗಂಟೆಗೆ ಶ್ರೀ ಲಕ್ಷ್ಮಿ ಶ್ರೀ ಪದ್ಮಾವತಿ ದೇವಿಯ ರೊಂದಿಗೆ ಶ್ರೀ ಶ್ರೀನಿವಾಸ ಸ್ವಾಮಿಯ ಕಲ್ಯಾಣೋತ್ಸವ ಜರುಲಿದು ಭಕ್ತಾದಿಗಳು ಅದರಲ್ಲೂ ವಿಶೇಷವಾಗಿ ನೂತನ ವಧು ವರರು ಈ ಕಲ್ಯಾಣೋತ್ಸವದಲ್ಲಿ ಪಾಲ್ಗೊಂಡು ಶ್ರೀದೇವಿ ಬೂದೇವಿ ಸಮೇತನಾದ ತಿಮ್ಮಪ್ಪ ಸ್ವಾಮಿಯ ದರ್ಶನ ಮಾಡಿದರೆ ಮನದ ಇಷ್ಟಾರ್ಥಗಳು ಈಡೇರುತ್ತದೆ ಎಂಬ ನಂಬಿಕೆ ಭಕ್ತರಲ್ಲಿ ಇರುವುದರಿಂದ ಸಹಸ್ರಾರು ಭಕ್ತರು ಪಾಲ್ಗೊಳ್ಳುವ ನೀರಿಕ್ಷೆ ಇದೆ ಎಂದರು.

28ರ ಶನಿವಾರ ಶ್ರೀ ಪರ್ವತ ಮಲ್ಲೇಶ್ವರ ಸ್ವಾಮಿ ಅವರಿಗೆ ಮಹಾ ರುದ್ರಾಭಿಷೇಕ ನಡೆಯಲಿದ್ದು ನಂತರ ಬಿಲ್ವಾರ್ಚನೆ ಸೇರಿದಂತೆ ನಾನಾ ಅರ್ಚನೆಗಳು ನಡೆಯಲಿವೆ. ರಾತ್ರಿ ಶ್ರೀ ಸತ್ಯನಾರಾಯಣ ಸ್ವಾಮಿ ಮತ್ತು ಶ್ರೀ ಮರಳು ಸಿದ್ದೇಶ್ವರ ಭಜನಾ ತಂಡದವರಿಂದ ಸಾಮೂಹಿಕ ಭಜನಾ ಕಾರ್ಯಕ್ರಮ ನಡೆಯಲಿದೆ.

ಮಾ. 1ರಂದು ಓರಗಲ್ ತಿಮ್ಮಪ್ಪ ಸ್ವಾಮಿ ಅವರ ಉತ್ಸವವು ಬೆಟ್ಟದ ಮೇಲೆ ನಡೆಯಲಿದ್ದು ನಂತರ ಕೆಂಚಪ್ಪ ಸ್ವಾಮಿಯವರಿಗೆ ಮಣೆವು ಬಳಿಕ ಭಕ್ತಾದಿಗಳಿಗೆ ಸಾಮೂಹಿಕ ಅನ್ನ ಸಂತರ್ಪಣೆ ನಡೆಯುವುದರೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ ಎಂದು ಮಾಹಿತಿ ನೀಡಿದರು. ಸ್ವಾಮಿಯವರ ಕಲ್ಯಾಣೋತ್ಸವ ಹಾಗೂ ಜಾತ್ರಾ ಮಹೋತ್ಸವದಲ್ಲಿ ಭಕ್ತರು ಶ್ರದ್ಧಾ ಭಕ್ತಿಯೊಂದಿಗೆ ಭಕ್ತರು ಪಾಲ್ಗೊಳ್ಳುವ ಮೂಲಕ ತಿಮ್ಮಪ್ಪ ಸ್ವಾಮಿ ಮತ್ತು ಪರ್ವತ ಮಲ್ಲೇಶ್ವರ ಸ್ವಾಮಿ ಅವರ ಅನುಗ್ರಹಕ್ಕೆ ಪಾತ್ರರಾಗುವಂತೆ ಮನವಿ ಮಾಡಿದರು.

ದೇವಾಲಯದ ಅಭಿವೃದ್ಧಿ ಸಮಿತಿ ಅಶೋಕ್, ಪ್ರಧಾನ ಅರ್ಚಕರಾದ ಪುಟ್ಟರಂಗನಾಥ್, ಕಾಂತರಾಜ್, ಕೃಷ್ಣಮೂರ್ತಿ ಮತ್ತಿತರರಿದ್ದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಅನುಕೂಲ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ರಾಜ್ಯಾದ್ಯಂತ ಲಕ್ಷಾಂತರ ಕುಟುಂಬಗಳು ಆರ್ಥಿಕವಾಗಿ ಸಬಲವಾಗಿವೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಆಲೂರು ತಾಲೂಕು ಮಗ್ಗೆ ವಲಯದ ರಾಯರಕೊಪ್ಪಲು ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವಲಯ ಮಟ್ಟದ ಸಾಮೂಹಿಕ ಶ್ರೀ ಲಕ್ಷ್ಮಿ ಪೂಜೆ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ.ವಿರೇಂದ್ರ ಹೆಗ್ಗಡೆ ಅವರು ನಡೆಸುವ



ಸಮಾಜ ಸೇವಾ ಕಾರ್ಯಗಳನ್ನು ಜನರು ಸದುಪಯೋಗಪಡಿಸಿಕೊಳ್ಳಬೇಕು. ಮಹಿಳಾ ಸಬಲೀಕರಣ ದೊಡ್ಡ ಶಕ್ತಿಯಾಗಿ ಬೆಳೆದು ನಿಂತಿದೆ ಎಂದರು.

ಸಾಮೂಹಿಕ ಶ್ರೀ ಲಕ್ಷ್ಮಿ ಪೂಜೆ ಸಮಿತಿ ಅಧ್ಯಕ್ಷ ಪಿ.ಜೆ. ಚಂದ್ರಶೇಖರ್ ಮಾತನಾಡಿ, ಯೋಜನೆಯಿಂದ ಕುಟುಂಬಗಳು ಆರ್ಥಿಕಾಗಿ ಸಬಲರಾಗುವುದಲ್ಲದೆ, ಕುಟುಂಬಗಳ ನಡುವೆ ಪರಸ್ಪರ ವಿಶ್ವಾಸ ಬೆಳೆಯುತ್ತದೆ. ಪ್ರಾಮಾಣಿಕತೆ ವೃದ್ಧಿಯಾಗುತ್ತದೆ ಎಂದರು. ಧಾರ್ಮಿಕ ಉಪನ್ಯಾಸಕರಾಗಿ ರಾಯರ ಕೊಪ್ಪಲು ಕೆಪಿಎಸ್ ಪ್ರೌಢಶಾಲೆ ಪ್ರಾಂಶುಪಾಲೆ ಶೀಲಾ ಮಾತನಾಡಿ, ಕ್ಷೇತ್ರದ ವತಿಯಿಂದ ನಡೆಯುವಂತ ಸಮಾಜ ಸೇವೆ ಕಾರ್ಯಗಳು ಸಮಾಜಕ್ಕೆ ಬಹಳಷ್ಟು ಅನುಕೂಲಕರವಾಗಿದೆ. ಸಾರ್ವಜನಿಕರು ಸಂಸ್ಕಾರವಂತರಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆಲೂರು ತಾಲೂಕು ಕ್ಷೇತ್ರ ಯೋಜನಾಧಿಕಾರಿ ಕೆ. ರತ್ನಾಕರ ಕೊಠಾರಿ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಮುಖೇನ ನಡೆಸಲ್ಪಡುವ ಸ್ವಸಹಾಯ ಸಂಘದ ಸದಸ್ಯರು ಆರ್ಥಿಕವಾಗಿ ಸಬಲರಾಗಬೇಕು ಎಂದರು.

ಕುಂದೂರು ಗ್ರಾ.ಪಂ. ಮಾಜಿ ಅಧ್ಯಕ್ಷೆ ಶೈಲಜಾ, ಒಕ್ಕೂಟದ ಅಧ್ಯಕ್ಷರು, ಪದಾಧಿಕಾರಿಗಳು, ವಲಯದ ಸೇವಾ ಪ್ರತಿನಿಧಿಗಳು, ಪ್ರಗತಿ ಬಂಧು ಸ್ವಸಹಾಯ ಸಂಘದ ಸದಸ್ಯರು, ಗೋವಿಂದಪ್ಪ ಉಪಸ್ಥಿತರಿದ್ದರು.

# ಕಾಂಗ್ರೆಸ್ ಹೈಕಮಾಂಡ್ ಇರುವುದೇ ಅನುಮಾನ: ಹೆಚ್.ಡಿ. ಕುಮಾರಸ್ವಾಮಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಕಾಂಗ್ರೆಸ್‌ನಲ್ಲಿ ಹೈಕಮಾಂಡ್ ಇದೆಯಾ, ಈಗ ನಡೆಯುತ್ತಿರುವುದನ್ನು ನೋಡಿದರೆ ಅನುಮಾನ ಮೂಡುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳಲು ಒಂದೊಂದು ಹೆಸರು ಮುಂದೆ ಬಿಡುತ್ತಿದ್ದಾರೆ. ಅಲ್ಲದೆ ಕುರ್ಚಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಒಂದೊಂದು ಹೆಸರು ಬರುತ್ತಿದೆ. ಬಹುಶಃ ಅದ್ಯಾವುದು ಕಾರ್ಯ ರೂಪಕ್ಕೆ ಬರಲ್ಲ. ಡ್ರಾಮಾ ನೋಡಿ ಅಂತ ಹೇಳಿ ಪರದೆ ಮೇಲೆ ಡ್ರಾಮ ಮಾಡ್ಕಂಡು ಕುಳಿತಿದ್ದಾರೆ ಎಂದು ಟೀಕಿಸಿದರು. ಬಿಜೆಪಿ ಶಾಸಕ ಚಂದ್ರು ಲಮಾಣಿ ಲೋಕಾಯುಕ್ತ ಬಲೆಗೆ ಬಿದ್ದ ವಿಚಾರ ಕುರಿತು ಪ್ರತಿಕ್ರಿಯಿಸಿದ ಕುಮಾರಸ್ವಾಮಿ ಅವರು, ನನಗೆ ಅವರ ಪರಿಚಯ ಅಷ್ಟು ಆತ್ಮೀಯವಾಗಿಲ್ಲ. ಷಡ್ಯಂತ್ರ ನಡೆದಿರುವುದು ನಿಜವೇ ಆಗಿದ್ದರೆ ಸರ್ಕಾರ ಸರಿಯಾದ ರೀತಿ ತನಿಖೆ ನಡೆಸಬೇಕು. ಎಂತೆಂತಹ ತನಿಖೆ ನಡೆಸಿದ್ದಾರೆ. ಇವರ ಎಸ್ಐಟಿ ಬಹಳ ಅದ್ಬುತವಾಗಿ ಕೆಲಸ ಮಾಡುತ್ತದೆಂದು ವ್ಯಂಗ್ಯವಾಡಿದರು. ನಾನು ಮುಖ್ಯಮಂತ್ರಿ ಆಗುವುದು ಮುಖ್ಯವಲ್ಲ. ಜನರ ಬದುಕು ಸರಿಪಡಿಸಬೇಕು. ನನಗೆ ಈ ಕೆಟ್ಟ ರೀತಿಯ ಸರ್ಕಾರ ಹೋಗಬೇಕು .ಆ ಮೇಲೆ ಮುಖ್ಯಮಂತ್ರಿ ಯಾರಾಗಬೇಕು ಅಂಥ ನೋಡೋಣ. ನನ್ನ ಆದ್ಯತೆ ಇಂತಹ ಕೆಟ್ಟ ಸರ್ಕಾರ ತೆಗೆಯುವುದೇ ಆಗಿದೆ ಎಂದರು.

# ನೆಹರು ನಗರದಲ್ಲಿ ಶಾಸಕ ಎ.ಮಂಜು ನೇತೃತ್ವದಲ್ಲಿ ಸಂಧಾನ ಸಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ನೆಹರು ನಗರ ಗ್ರಾಮಕ್ಕೆ ಹೊಂದುಕೊಂಡಂತೆ ಇರುವ ಕಲ್ಲು ಕೋರೆ ಮತ್ತು ಜಲ್ಲಿ ಕ್ರಷರ್‌ನಿಂದ ಭಾರೀ ಭೂಮಿ ಅದಿರುವಿಕೆ, ಶಬ್ದ ಮಾಲಿನ್ಯ ಹಾಗೂ ಭೂ ಕುಸಿತ ಮತ್ತು ವಾಯು ಮಾಲಿನ್ಯ ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಸರ್ಕಾರಿ ಶಾಲೆಗೆ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸ ಕಳಿಸದ ಹೋರಾಟಕ್ಕೆ ಇಳಿದ ಪರಿಣಾಮ ಗ್ರಾಮದಲ್ಲಿ ಅಶಾಂತಿ ಸೃಷ್ಟಿ ಹಿನ್ನೆಲೆಯಲ್ಲಿ ಶಾಸಕ ಎ. ಮಂಜು ಹಾಗೂ ತಾಲ್ಲೂಕು ಆಡಳಿತ ಭೇಟಿ ನೀಡಿ ಶಾಂತಿ ಸಭೆ ನಡೆಸಲಾಯಿತು. ಮಲ್ಲಿಪಟ್ಟಣ ಹೋಬಳಿಯ ನೆಹರುನಗರದ ಶಾಲೆ ಆವರಣದಲ್ಲಿ ಶಾಸಕರ ನೇತೃತ್ವದಲ್ಲಿ ಶಾಂತಿ ಸಭೆ ಪಾಲ್ಗೊಂಡ ಗ್ರಾಮಸ್ಥ ರಮೇಶ್ ಮಾತನಾಡಿ, ಅರಸೀಕಟ್ಟೆ ಕಾವಲು ಸರ್ವೆ 116ರಲ್ಲಿ ಈಗಾಗಲೇ ಕೋರೆ ಹಾಗೂ ಜಲ್ಲಿ ಕ್ರಷರ್ ನಡೆಸಲಾಗುತ್ತಿದೆ. ಆದರೆ ನೆಹರು ನಗರಕ್ಕೆ ಹೊಂಡಿಕೊಂಡಂತೆ ಇರುವ ಸ್ಥಳದಲ್ಲಿ ಹೊಸದಾಗಿ ಕ್ರಷರ್ ಅನುಮತಿ




ಕೊಟ್ಟಿರುವುದು ಗ್ರಾಮಸ್ಥರಲ್ಲಿ ಭಯದ ಆತಂಕ ಮೂಡಿದೆ. ಹೇಮಾವತಿ ಅಣೆಕಟ್ಟೆ ನಿರ್ಮಾಣದಿಂದ ಮುಳುಗಡೆ ಹೊಂದಿದ ನಾಗರಿಕರಿಗೆ ಸರ್ಕಾರ ಅರಸೀಕಟ್ಟೆ ಕಾವಲು ಗ್ರಾಮದ ಸರ್ವೆ ನಂ. 116ರಲ್ಲಿ ಭೂಮಿ ಮಂಜೂರು ಮಾಡಿಕೊಟ್ಟ ಹಿನ್ನೆಲೆಯಲ್ಲಿ ಬದುಕು ಕಟ್ಟಿಕೊಂಡ ದಲಿತ ಸಮುದಾಯದ ಜನತೆಗೆ ಗ್ರಾಮದ ಪಕ್ಕದಲ್ಲೇ ಕ್ರಷರ್ ಪ್ರಾರಂಭವಾಗುತ್ತಿರುವುದು ಜೀವ ಭಯದ ಆತಂಕ ಮೂಡಿದೆ ಎಂದರು.

ಕ್ರಷರ್ ಮಾಲೀಕರು ಮುಳುಗಡೆ ಭೂಮಿಯ ಫಲಾನುಭವಿಗಳಲ್ಲಿ ಒಬ್ಬರಾಗಿದ್ದು ಕ್ರಷರ್ ತೆರೆಯಲು ಸರ್ಕಾರದ ನಿಯಮಾನುಸಾರವಾಗಿ ದಾಖಲೆಗಳೊಂದಿಗೆ ಕ್ರಷರ್ ತೆರೆಯಲು ಮುಂದಾದರು ನೆಹರುನಗರಕ್ಕೆ 100 ಮೀಟರ್ ಅಂತರದಲ್ಲಿ ಇರುವ ಕಾರಣ ಗ್ರಾಮಸ್ಥರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಗಣಿ ಮತ್ತು ಭೂ ಇಲಾಖೆ , ಅರಣ್ಯ ಇಲಾಖೆ ಹಾಗೂ ಜಿಲ್ಲಾಧಿಕಾರಿ ನೇತೃತ್ವದ ಟಾಸ್ಕ್ ಫೋರ್ಸ್ ಅನುಮತಿ ನೀಡಿದ ಹಿನ್ನೆಲೆಯಲ್ಲಿ ಕ್ರಷರ್ ಪ್ರಾರಂಭಿಸಲಾಯಿತು. ಆದರೆ ಜಲ್ಲಿ ಕ್ರಷರ್‌ನಿಂದ ಭಾರೀ ಧೂಳು ಮತ್ತು ಶಬ್ದ ಹಾಗೂ ಭೂಮಿ ಅದಿರುವಿಕೆಯಿಂದ ಭಯಗೊಂಡ ಗ್ರಾಮಸ್ಥರು ತಾವು ಜೀವಿಸುತ್ತಿರುವ ಮನೆಗಳು ಬಿದ್ದು ಹೋಗುತ್ತದೆ ಈಗಾಗಲೇ ಸ್ವಂತ ಗ್ರಾಮ ಹೇಮಾವತಿ ಹಿನ್ನೀರಿಗೆ ಮುಳುಗಡೆಯಾದರೆ ಬದುಕು ಕಟ್ಟಿಕೊಂಡ ನೆಹರುನಗರ ಗ್ರಾಮದ ಕ್ರಷರ್ ಚಟುವಟಿಕೆಯಿಂದ ಜೀವ ಕಳೆದುಕೊಳ್ಳವ ಆತಂಕವಾಗಿದೆ ಎಂದು ತಮ್ಮ ನೋವನ್ನು ತೊಡಿಕೊಂಡರು.

ಸಭೆಯಲ್ಲಿ ಕ್ರಷರ್ ಮಾಲೀಕ ಸರ್ಕಾರದ ನಿಯಮಾನುಸಾರ ದಾಖಲೆ ಇದ್ದು ಕ್ರಷರ್ ನಡೆಸಲು ಗ್ರಾಮಸ್ಥರು ಬಿಡುತ್ತಿಲ್ಲ ಎಂದು ಅಕ್ರೋಶಭರವಾಗಿ ವಾದ ಮಂಡಿಸಿದರು. ಶಾಂತಿ ಸಭೆ ಆಗಮಿಸಿ ಶಾಸಕರು ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು ಗ್ರಾಮದಲ್ಲಿ ಅಶಾಂತಿ ಸೃಷ್ಟಿಯಾಗಿದ್ದು ಈ ವಿಷಯವಾಗಿ ಜಿಲ್ಲಾಧಿಕಾರಿಗೆ ಪತ್ರ ಬರೆದು ಸೂಕ್ತ ಮಾಹಿತಿ ಕೇಳಲಾಗುವುದು. ತಕ್ಷಣದಿಂದ ಗ್ರಾಮದ ಸರ್ಕಾರ ಶಾಲೆಗೆ ಗ್ರಾಮಸ್ಥರು ಮಕ್ಕಳನ್ನು ಕಳಿಸುವಂತೆ ಸೂಚಿಸಿದರು. ಶಾಂತಿ ಸಭೆಯಲ್ಲಿ ತಹಶೀಲ್ದಾರ್ ಸೌಮ್ಯ, ಗಣಿ ಮತ್ತು ಭೂ ಇಲಾಖೆ ಅಧಿಕಾರಿ ಮಮತ, ಅರಣ್ಯ ವಲಯ ಅಧಿಕಾರಿ ರತ್ನ, ಕ್ಷೇತ್ರಶಿಕ್ಷಣಾಧಿಕಾರಿ ಕೆ.ಪಿ.ನಾರಾಯಣ, ಪಿಎಸ್ಐ ಪ್ರಹ್ಲಾದ್ ಇತರರಿದ್ದರು.

# 9 ರೂಪಾಯಿಗೆ ಬ್ಯಾಂಕ್ ಕರೆ ಪೈಸೆಗಾಗಿ ವಕೀಲರ ಹೋರಾಟ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಬ್ಯಾಂಕುಗಳ ಸಣ್ಣ ತಪ್ಪುಗಳು ಅಥವಾ ತಾಂತ್ರಿಕ ಕಾರಣಗಳು ಜನಸಾಮಾನ್ಯರನ್ನು ಎಷ್ಟು ಹೈರಾಣಾಗಿಸುತ್ತವೆ ಎಂಬುದಕ್ಕೆ ಸಕಲೇಶಪುರದಲ್ಲಿ ನಡೆದ ಈ ಘಟನೆ ಸಾಕ್ಷಿಯಾಗಿದೆ. ಕೇವಲ 66 ಪೈಸೆ ಹಣದ ವಿಚಾರಕ್ಕಾಗಿ ವ್ಯಕ್ತಿಯೊಬ್ಬರು ಬ್ಯಾಂಕ್ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಲು ನಿರ್ಧರಿಸಿದ್ದಾರೆ.

ಸಕಲೇಶಪುರದ ನಿವಾಸಿ, ವಕೀಲ ಚರಣ್ ಎಂಬುವವರು ಸ್ಥಳೀಯ ಬ್ಯಾಂಕ್ ಶಾಖೆಯಲ್ಲಿ ಸಾಲ ಪಡೆದಿದ್ದರು. ಇತ್ತೀಚೆಗೆ ಅವರ ಮೊಬೈಲ್‌ಗೆ ಬ್ಯಾಂಕ್‌ನಿಂದ ಸಂದೇಶವೊಂದು ಬಂದಿದ್ದು, ಅದರಲ್ಲಿ ಅವರ ಸಾಲದ ಬಾಕಿ ಮೊತ್ತ 9 ರೂಪಾಯಿ 34 ಪೈಸೆ ಇದೆ ಎಂದು ತಿಳಿಸಲಾಗಿತ್ತು.

ಬ್ಯಾಂಕ್ ಸೂಚನೆಯಂತೆ ಚರಣ್ ಅವರು ಸಾಲದ ಖಾತೆಗೆ 10 ರೂಪಾಯಿ ಪಾವತಿಸಿದ್ದಾರೆ. ಆದರೆ, ಬಾಕಿ ಮೊತ್ತ ಕಳೆದು ಉಳಿದ 66 ಪೈಸೆ ಹಣವನ್ನು ವಾಪಸ್ ನೀಡುವಂತೆ ಅವರು ಬ್ಯಾಂಕ್ ಸಿಬ್ಬಂದಿಯನ್ನು ಕೇಳಿದಾಗ, ಸಿಬ್ಬಂದಿ ಅದನ್ನು ನಿರ್ಲಕ್ಷಿಸಿದ್ದಾರೆ ಎನ್ನಲಾಗಿದೆ.

ಬ್ಯಾಂಕಿನವರು ಗ್ರಾಹಕರಿಂದ ಒಂದು ಪೈಸೆ ಬಾಕಿ ಇದ್ದರೂ ಬಿಡುವುದಿಲ್ಲ. ಆದರೆ ಗ್ರಾಹಕರ ಹಣ ಉಳಿದಾಗ ಅದನ್ನು ಹಿಂದಿರುಗಿಸಲು ತೋರುವ ಬೇಜವಾಬ್ದಾರಿತನ ಸರಿಯಲ್ಲ ಎಂಬುದು ಚರಣ್ ಅವರ ವಾದ.

ಇದು ಕೇವಲ 66 ಪೈಸೆಯ ವಿಚಾರವಲ್ಲ, ಇದು ಬ್ಯಾಂಕ್‌ಗಳ ಕಾರ್ಯವೈಖರಿ ಮತ್ತು ಗ್ರಾಹಕರ ಹಕ್ಕಿನ ಪ್ರಶ್ನೆ. ನ್ಯಾಯಕ್ಕಾಗಿ ನಾನು ಕೋರ್ಟ್ ಮೊರೆ ಹೋಗಲು ಸಿದ್ಧನಿದ್ದೇನೆ ಎಂದು ಚರಣ್ ಹೇಳಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಫೆಬ್ರವರಿ-27

**1594:** ಹೆನ್ರಿ ನಾಲ್ಕನೆ ಫ್ರಾನ್ಸ್‌ನ ರಾಜನಾಗಿ ಪಟ್ಟಾಭಿಷೇಕಗೊಂಡರು.

**1931:** ಭಾರತದ ಕ್ರಾಂತಿಕಾರಿ ಚಂದ್ರಶೇಖರ್ ಆಜಾದ್ ಅಲಹಾಬಾದ್‌ನ ಆಲ್ಫ್ರೆಡ್ ಪಾರ್ಕ್‌ನಲ್ಲಿ ಬ್ರಿಟಿಷರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಶಹೀದರಾದರು.

**2002:** ಗುಜರಾತಿನ ಗೋಧ್ರಾ ರೈಲು ನಿಲ್ದಾಣದ ಬಳಿ ಸಬರ್ಮತಿ ಎಕ್ಸ್‌ಪ್ರೆಸ್‌ಗೆ ಬೆಂಕಿ ಹಚ್ಚಿದ ಘಟನೆ ನಡೆಯಿತು. ಈ ಘಟನೆ ನಂತರ ರಾಜ್ಯದಲ್ಲಿ ಭಾರೀ ಗಲಭೆಗಳು ಉಂಟಾದವು.

### ಜನನ

**1807:** ಅಮೆರಿಕದ ಕವಿ ಹೆನ್ರಿ ವುಡ್ಸ್‌ವರ್ಥ್ ಲಾಂಗ್‌ಫೆಲೋ

**1932:** ಪ್ರಸಿದ್ಧ ನಟಿ ಎಲಿಜಬೆತ್ ಟೇಲರ್

### ಮರಣ

**1931:** ಚಂದ್ರಶೇಖರ್ ಆಜಾದ್, ಭಾರತೀಯ ಸ್ವಾತಂತ್ರ್ಯ ಹೋರಾಟಗಾರ

**2015:** ನಟ ಲಿಯೋನಾರ್ಡ್ ನಿಮೋಯ್

# ಕಾಡಾನೆ ಸಮಸ್ಯೆ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಲೆನಾಡು ಭಾಗದಲ್ಲಿ ದೀರ್ಘ ಕಾಲದಿಂದ ಜೀವಂತವಾಗಿರುವ ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತೇನೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭರವಸೆ ನೀಡಿದರು.

ತಾಲ್ಲೂಕಿನ ಕೆರೋಡಿ ಗ್ರಾಮದ ಗೋಪಾಲಸ್ವಾಮಿ ದೇವಸ್ಥಾನದಲ್ಲಿ ನೂತನ ದೇವರುಗಳ ಪ್ರತಿಷ್ಠಾಪನಾ



ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಗುರುವಾರ ಮಾತನಾಡಿ, ಕಾಡಾನೆ ಮತ್ತು ಮನುಷ್ಯನ ನಡುವಿನ ಸಂಘರ್ಷ ಈ ಭಾಗದಲ್ಲಿ ಸಾಮಾನ್ಯವಾಗಿದೆ. ಹಲವಾರು ಕುಟುಂಬಗಳಲ್ಲಿ ಸಾವು ಮತ್ತು ನೋವುಗಳಾಗುತ್ತಿದೆ. ಕಾಡಾನೆ ಸಮಸ್ಯೆಯನ್ನು ಬಗೆಹರಿಸುವುಲ್ಲಿ ಸರ್ಕಾರಗಳು ವಿಫಲವಾಗಿದೆ. 2018ರಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ ಕಾಡಾನೆ ಸಮಸ್ಯೆ ತಡೆಗಟ್ಟಲು ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕಾಗಿ 100 ಕೋಟಿ ರೂ. ನೀಡಿದ್ದೆ. ನಂತರ ಆಡಳಿತ ನಡೆಸಿದವರು ಅಷ್ಟಾಗಿ ಗಮನಹರಿಸದ ಕಾರಣ ಸಮಸ್ಯೆ ಬಗೆಹರಿದಿಲ್ಲ ಎದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ ಸಿಲುಕಿ ಮಹಿಳೆ ಮೃತಪಟ್ಟಿರುವುದು ನೋವಿನ ವಿಚಾರ. ಈ ಹಿನ್ನಲೆಯಲ್ಲಿ ಕೇಂದ್ರದ ಅರಣ್ಯ ಇಲಾಖೆ ಸಚಿವರ ಬಳಿ ಸಮಸ್ಯೆ ಪರಿಹರಿಸುವ ಕುರಿತು ಚರ್ಚೆ ಮಾಡಿದ್ದೇನೆ. 2021ರಲ್ಲಿ ಅರಣ್ಯ ಇಲಾಖೆಯವರು ಕಾಡಾನೆ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ವರದಿ ನೀಡಿದ್ದಾರೆ. ಯಾವ ರೀತಿ ಕಾಡಾನೆ ಸಮಸ್ಯೆಯಿಂದ ಮುಕ್ತಿ ಹೊಂದುವುದು ಎಂಬ ನಿಟ್ಟಿನಲ್ಲಿ ವರದಿ ಓದುತ್ತಿದ್ದೇನೆ. ಪ್ರತಿಯೊಬ್ಬರು ನೆಮ್ಮದಿಯಾಗಿ ಬದುಕಬೇಕೆಂದರು.

# 6 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪಟ್ಟಣದ ಮುಖ್ಯ ರಸ್ತೆಯನ್ನು 6 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗುವುದು ಎಂದು ಶಾಸಕ ಎ.ಮಂಜು ತಿಳಿಸಿದರು.

ಪಟ್ಟಣದ ಇಂದಿರಾ ಕ್ಯಾಂಟಿನ್ ಮುಂಭಾಗದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಡಿಗ್ರಿ ಕಾಲೇಜಿನಿಂದ ಆರಂಭಗೊಳ್ಳುವ ರಸ್ತೆ ತಾಲೂಕು ಕಚೇರಿ ತನಕ 30 ಮೀಟರ್ ಅಂತರದಲ್ಲಿ ಅಭಿವೃದ್ಧಿಗೊಳ್ಳಲಿದೆ. ಅದರೊಂದಿಗೆ ಎರಡು ಮೀಟರ್ ಸಾರ್ವಜನಿಕ ಫುಟ್ ಪಾತ್ ಎರಡು ಕಡೆಯು ಚರಂಡಿ ನಿರ್ಮಾಣಗೊಳ್ಳಲಿದೆ. ಪ್ರಮುಖವಾಗಿ ಬಸವೇಶ್ವರ ವೃತ್ತ, ಅನಕೃ ವೃತ್ತ, ದೊಡ್ಡಮ್ಮ ವೃತ್ತ ಮತ್ತು ನಂಜೇಗೌಡ ವೃತ್ತಗಳ ಬಳಿ ವಿಶೇಷವಾಗಿ ರಸ್ತೆ ಅಭಿವೃದ್ಧಿಗೊಳ್ಳಲಿದೆ. ಸಾರ್ವಜನಿಕರು ಖುದ್ದು ನಿಂತು ರಸ್ತೆ ಅಭಿವೃದ್ಧಿಯನ್ನು ಮಾಡಿಸಿಕೊಂಡ ಪಟ್ಟಣದ ಅಂದಕ್ಕೆ ಸಹಕಾರ ನೀಡಬೇಕೆಂದು ಅವರು ಮನವಿ ಮಾಡಿದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248